SEPTEMBER 29, 2025

**AKASHAVANI - DHARWAD**

**PRADESH SAMACHARA (KANNADA) 12 PM**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

ಶಾರದೀಯ ನವರಾತ್ರಿಯ ಎಂಟನೇ ದಿನವಾದ ಇಂದು, ನಾಡಿನಾದ್ಯಂತ ದೇವಿ ಮಂದಿರಗಳಲ್ಲಿ, ಮಾತೆ ಮಹಾ ಗೌರಿಗೆ, ವಿಶೇಷ ಪೂಜೆಯನ್ನು, ಶ್ರದ್ಧಾ–ಭಕ್ತಿಯಿಂದ, ಹೆಂಗಳೆಯರು ಸಲ್ಲಿಸುತ್ತಿದ್ದಾರೆ.

<><><>

ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ, ಧಾರವಾಡ ಸೇವಾ ಕೇಂದ್ರದಲ್ಲಿ, ನಾಡಹಬ್ಬ ದಸರಾ ಅಂಗವಾಗಿ, ಚೈತನ್ಯ ದೇವಿಯರ ವಿಶೇಷ ದರ್ಶನ ಏರ್ಪಡಿಸಲಾಗಿತ್ತು. ದಸರಾ ಹಬ್ಬದ ಹಿನ್ನೆಲೆ, ಸತ್ ಪ್ರವೃತ್ತಿಗಳ ಕುರಿತ, ಸಂದೇಶ ಪ್ರದರ್ಶಿನಿ ಜರುಗಿತು.

<><><>

ಶಿವಮೊಗ್ಗ ತಾಲೂಕು, ಕೂಡಲಿಯ ಶ್ರೀಮದ್ ಜಗದ್ಗುರು ಶಂಕರಾಚಾರ್ಯ, ಕೂಡಲಿ ಶೃಂಗೇರಿ, ದಕ್ಷಿಣಾಮ್ನಾಯ, ಮೂಲ ಶ್ರೀ ಶಾರದಾ ಪೀಠಮ್‌ನಲ್ಲಿ, ನವರಾತ್ರಿ ಪ್ರಯುಕ್ತ, ಲೋಕಲ್ಯಾಣಾರ್ಥ ಅಕ್ಟೋಬರ್ 1 ರಂದು, ಶತಚಂಡಿ ಯಾಗವನ್ನು ಆಯೋಜಿಸಲಾಗಿದೆ.

<><><>

ಸೇವಾ ಪಾಕ್ಷಿಕದ ಅಂಗವಾಗಿ, ಕೇಂದ್ರ ಗ್ರಾಹಕರ ವ್ಯವಹಾರಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ, ಹುಬ್ಬಳ್ಳಿಯ ಸವಾಯಿ ಗಂಧರ್ವ ಕಲಾ ಮಂದಿರದಲ್ಲಿ, ವಿಶೇ ’ ಚೇತನರಿಗೆ, ಸಾಧನ ಸಲಕರಣೆ ವಿತರಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು, ದೇಶದ ಪ್ರತಿಯೊಬ್ಬ ನಾಗರಿಕನನ್ನು ಸಶಕ್ತಗೊಳಿಸುವ ಸಂಕಲ್ಪ ಹೊಂದಿರುವ, ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ, ಭಾರತೀಯ ಕೃತಕ ಅಂಗಗಳ ಉತ್ಪಾದನಾ ನಿಗಮ - ALIMCO ಹಾಗೂ ಪ್ರಧಾನಮಂತ್ರಿ ದಿವ್ಯಶಾ ಕೇಂದ್ರ P.M.D.K. ಶಾಖೆಯಿಂದ, ಹಿರಿಯ ನಾಗರಿಕರಿಗೂ, ನೆರವಿನ ಉಪಕರಣ ವಿತರಿಸುತ್ತಿದೆ, ಎಂದರು.

<><><>

‘ನೀವು, ನಾವು ಹಾಗೂ ಸಮುದಾಯ ಈಗಲೇ ಕಾರ್ಯಪ್ರವೃತ್ತರಾಗೋಣ’, ಎಂಬ ಧ್ಯೇಯದೊಂದಿಗೆ, ‘ವಿಶ್ವ ರೇಬಿಸ್ ಜಾಗ್ರತಿ ದಿನಾಚರಣೆ’ ಜರುಗಿತು. ಪಶುಪಾಲನೆ ಮತ್ತು ಪಶು ವೈದ್ಯಕೀಯ ಇಲಾಖೆ, ರಾಜ್ಯಾದ್ಯಂತ ಉಚಿತ ರೇಬಿಸ್ ಲಸಿಕೆ ಅಭಿಯಾನ ಆಯೋಜಿಸಿತ್ತು. ಬೆಳಗಾವಿ ಜಿಲ್ಲೆಯಲ್ಲಿ ಆಯೋಜಿಸಲಾದ, ರೇಬಿಸ್ ತಡೆ ಜನಜಾಗೃತಿ ಕಾರ್ಯಕ್ರಮದ

ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಪಶುಪಾಲನಾ ಇಲಾಖೆ ಉಪ ನಿರ್ದೇಶಕರಾದ ಡಾಕ್ಟರ ರವಿ ಸಾಲಿಗೌಡರ್.

<><><>

ಧ್ವನಿ: ಡಾಕ್ಟರ ರವಿ ಸಾಲಿಗೌಡರ್ 38 ಸೆಕೆಂದುಗಳು

<><><>

ಸರಕು ಮತ್ತು ಸೇವಾ ತೆರಿಗೆ – ನೆಕ್ಸ್ಟ್ ಜೆನ್ ಜಿ.ಎಸ್.ಟಿ – 2.೦. ಸುಧಾರಣೆ, ಬಡವರು, ಮಧ್ಯಮ ವರ್ಗದವರ ಹಿತದೃಷ್ಟಿಯಿಂದ ಕೇಂದ್ರ ಸರ್ಕಾರ ಕೈಗೊಂಡ, ಕ್ರಾಂತಿಕಾರಕ, ಜನಪರ ನಿರ್ಣಯ ಎಂದು, ಉತ್ತರಕನ್ನಡ ಸಂಸದ, ವಿಶ್ವೇಶ್ವರ ಹೆಗಡೆ ಕಾಗೇರಿ, ಹೇಳಿದ್ದಾರೆ. ಉತ್ತರಕನ್ನಡ ಜಿಲ್ಲೆ, ಯಲ್ಲಾಪುರದಲ್ಲಿ ಮಾತನಾಡಿ, ಜಿ.ಎಸ್.ಟಿ. ಸುಧಾರಣೆ ಹಾಗೂ ಬಚತ್ ಉತ್ಸವ್ ದಿಂದ, ಆರ್ಥಿಕ ಚಟುವಟಿಕೆಗಳು, ಉತ್ಪಾದನೆ, ಉದ್ಯೋಗ ಸೃಷ್ಟಿ ಹೆಚ್ಚಳವಾಗಲಿದೆ. ದೇಶದ ಆರ್ಥಿಕ ಬಲ ವರ್ಧನೆಯಾಗಲಿದೆ, ಎಂದರು. ದೇಶದಲ್ಲಿ ಮೊದಲು ಹಲವು ವಿಧದ ತೆರಿಗೆ ಸಂಗ್ರಹ ಪದ್ಧತಿಯಿತ್ತು. ಜಿ.ಎಸ್.ಟಿ ಮೂಲಕ, 'ಒಂದು ದೇಶ; ಒಂದು ತೆರಿಗೆ' ವ್ಯವಸ್ಥೆಯನ್ನು, ಪ್ರಧಾನಮಂತ್ರಿ ಮೋದಿ ಜಾರಿಗೆ ತಂದರು, ಎಂದು ಸಂಸದ ಕಾಗೇರಿ ಶ್ಲಾಘಿಸಿದರು.

<><><>

ರಾಜ್ಯದ ಭೀಮಾ ನದಿ ಜಲಾನಯನ, ಪ್ರದೇಶದಲ್ಲಿ ಸತತ ಮಳೆಯಿಂದ ನದಿ ನೀರು ಉಕ್ಕಿ ಹರಿಯುತ್ತಿದ್ದು, ಕಲಬುರಗಿ, ಯಾದಗಿರಿ, ವಿಜಯಪುರ ಜಿಲ್ಲೆಗಳ ಜನಜೀವನ ಅಸ್ತವ್ಯಸ್ತಗೊಂಡಿದೆ ಹಾಗೂ ಹಲವೆಡೆಗಳಲ್ಲಿ ರಸ್ತೆ ಸಂಪರ್ಕ ಕಡಿತಗೊಂಡಿದೆ ಎಂದು, ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ ಖರ್ಗೆ ಹೇಳಿದ್ದಾರೆ. ತಮ್ಮ ಎಕ್ಸ್ ಖಾತೆ ಮೂಲಕ ಮಾಹಿತಿ ಹಂಚಿಕೊಂಡಿರುವ ಅವರು, ಈ ತನಕ 8 ಸಾವಿರ ಜನರನ್ನು ಸುರಕ್ಷಿತವಾಗಿ ಸ್ಥಳಾಂತರಿಸಲಾಗಿದೆ. ಜಿಲ್ಲಾಡಳಿತ ಹಾಗೂ ರಾಜ್ಯ ವಿಪತ್ತು ನಿರ್ವಹಣಾ ಪಡೆ, ವಿವಿಧ ಇಲಾಖೆಗಳೊಂದಿಗೆ ಕಾರ್ಯನಿರ್ವಹಿಸುತ್ತಿದ್ದು, ಜನ ಹಾಗೂ ಜಾನುವಾರು ರಕ್ಷಣೆಯಲ್ಲಿ ನಿರಂತರವಾಗಿ ತೊಡಗಿದೆ ಎಂದಿದ್ದಾರೆ.

<><><>

ಚಿತ್ತಾಪುರ ತಾಲೂಕಿನ ಚಾಮನೂರ ಮತ್ತು ಕಡಬೂರ ಗ್ರಾಮಗಳ ನೆರೆ ಪೀಡಿತ ಪ್ರದೇಶಗಳಿಗೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭಂವರ್ ಸಿಂಗ್ ಮೀನಾ ಅವರು ಭೇಟಿ ನೀಡಿದ ರಕ್ಷಣಾ ಕಾರ್ಯಚರಣೆ ಪರಿಶೀಲಿಸಿದರು.

<><><>

ಬೀದರ್ ಜಿಲ್ಲೆಯಲ್ಲಿ ಕಳೆದ ಒಂದು ವಾರದಿಂದ ಸುರಿಯುತ್ತಿರುವ ಧಾರಾಕಾರ ಮಳೆಯಿಂದ, ಅಪಾರ ಪ್ರಮಾಣದ ಬೆಳೆ ಹಾಗೂ ಮೂಲಸೌಕರ್ಯ ಹಾನಿ ಸಂಭವಿಸಿದ್ದು, ಮುಖ್ಯಮಂತ್ರಿಯವರು ನಾಳೆ ವೈಮಾನಿಕ ಸಮೀಕ್ಷೆ ನಡೆಸಿ, ಪರಿಶೀಲಿಸುವ ಭರವಸೆ ನೀಡಿರುವುದಾಗಿ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದ್ದಾರೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ